ನಾನು ನಿಧಾನವಾಗಿ ಹೋಗಿ ಹಣತೆ ದೀಪ ಆರಿಸಿ ಅವಳೊಡನೆ, ಅವಳ ಮಗ್ಗುಲಲ್ಲಿ ಮಲಗಿ ಹೊದಿಕೆ ಎಳೆದು ಕೊಂಡು ಬಿಟ್ಟೆ. ಇಡೀ ರಾತ್ರಿ ಮನ್ಮಥನ ಕೇಕೆಯೋ ಕೇಕೆ. ಆಕೆ ಇದನ್ನು ಸ್ವಪ್ನ ಎಂದು ತಿಳಿದಳೋ ಅಥವಾ ನಿಜವಾಗಿ ಅನುಭವಿಸಿದಳೋ–

■ ಜಯಪ್ರಕಾಶ ಮಾವಿನಕುಳಿ

**ಎದೆಯ ಗೂಡಿನೊಳೇನೋ**
**ಗಲಭೆಯಾಗಿವುದು**
**ವಿಧ ವಿಧದ ಹಕ್ಕಿಗಳು**
**ಚಿಲಿಗುಟ್ಟುತಿಹವು**

ಮನೆಯಲ್ಲಿ ಪ್ರಕ್ಷುಬ್ಧತೆ ನೆಲೆಸಿತ್ತು. ಹೆಂಡತಿ ಸಿಕ್ಕಾಪಟ್ಟೆ ಕೂಗುತ್ತಿದ್ದಳು. ಕೂಗಿ ಕೂಗಿ ಸುಸ್ತಾಗಿ ಕಂಬಳಿ ಹೊದ್ದು ಘನರೋಗ ಬಂದಂತೆ ಮಲಗಿದ್ದಳು. ನನ್ನನ್ನು ಕಂಡು 'ಮಾತಾಡಿ, ಮಾತಾಡಿ ಬಾಯಿಗೆ ಕುಂಟೆ ಹಾಕಿಕ್ಕೊಂಡು ಕುಳಿತಿದ್ದೀರಲ್ಲ. ಮನೆಯೆಂಬ ಮನೆಯೇ ತೊಳೆದು ಹೋಗುತ್ತಿದೆಯಲ್ಲ, ಇಷ್ಟು ವರ್ಷ ವೈನಾಗಿಟ್ಟುಕೊಂಡಿದ್ದ ಮನೆ ಮನೆತನದ ಮಾನ ಮರ್ಯಾದೆ ಹೀಗೆ ಕಚ್ಚೆ ಹರುಕ ಮಗನ ಕಾಲ ಗತೀಲಿ ಇಡೀ ರಸ್ತೆಯ ಮೇಲೆ ತೊಳೆದು ಹೋಗುತ್ತಿದೆಯಲ್ಲ... ಇದನ್ನು ನೋಡಿಯೂ ಗರಬಡಿದವರಂತೆ ಇದ್ದೀರಲ್ಲ. ಛೀ! ನೀವೆಂಥಾ ಗಂಡಸರು...' ಇದು ಅವಳು ಹೇಳುತ್ತಿರುವುದು ಮೊದಲ ಸಲ ಅಲ್ಲ.

ಬೆಳಗಿನಿಂದ ಈ ಮಂಗಳಾರತಿ ನಡೆಯುತ್ತಲೇ ಇದೆ. ಇಷ್ಟೆ ಅಲ್ಲ '.... ನೀವೇನೋ ಹೊರ ಊರಿನಿಂದ ಬಂದವರು. ಇದೇ ಮನೇಲಿ ಇದ್ದವಳು. ನನ್ನಪ್ಪನ ಮನೆತನ ನಾಲ್ಕು ತಲೆಮಾರಿನಿಂದ ಹೆಸರು ವಾಸಿ, ಜನ ಕೈತೋರಿಸಿ ಆಡಿಕೋತಾರೆ...'

ಮಾತು ಜೋರಾಗುತ್ತಾ ಹೋಗುತ್ತದೆ.

ತಾರಕಸ್ವರದ ಮಾತು ಅಳುವಿನ ಆರಂಭದೊಡನೆ ನಿಂತು ಹೋಗುತ್ತದೆ. ಅಳು... ಬಿಕ್ಕಿ ಬಿಕ್ಕಿ ಅಳು.

ಬರಿಯ ಅಳು ಮುಗಿದು ಮೌನ ಆಚರಿಸುತ್ತದೆ

ಮತ್ತೆ ವರಾತ ಶುರು. ಇನ್ನೊಂದು ರೂಪದಲ್ಲಿ.

ನಾನು ಮೌನಿ.

ಮೌನಿ ಎಂದು ಹೇಳಿದರೂ ತಲೆಯಲ್ಲಿ ವಿಚಿತ್ರ ಆಲೋಚನೆಗಳು ಕೇಕೆ ಹಾಕಿ ಕುಣಿಯುತ್ತಿವೆ.

ಕಾಲ ಚಕ್ರದ ಉರುಳುವಿಕೆ ಕಂಡು ಅಚ್ಚರಿ.

* * *

ಈ ಉಪದ್ರಾವಕ್ಕೆ ಮುಖ್ಯ ಹೇತು ಮಗ–

ಕಾಲೇಜಿನಲ್ಲಿ ಅಧ್ಯಾಪಕನಾಗಿದ್ದ ಮಗ–

ಮದುವೆಗೆ ಬಂದ ತರುಣ ಮಗ–

ಬಂದಿದ್ದು.

ಬರೇ ಬಂದಿದ್ದಲ್ಲ– ಅವನು ಹೇಳಿದ್ದು.

ಬರೇ ಹೇಳಿದ್ದಲ್ಲ– ಹಠ ಹಿಡಿದು ಹೆದರಿಸಿ ಹೋಗಿದ್ದೂ.

'ನೋಡಿಯಪ್ಪ ಒಂದು ವಿಷಯ ಮಾತಾಡಕ್ಕೆ ಇದೆ. ಅಮ್ಮಾ, ನೀನು ಬಾ ಇಲ್ಲಿಗೆ' ಅಂತ ಶುರು ಮಾಡಿದ ಈ ಮನುಷ್ಯ ತಾನು ಕೆಲಕ್ಕೆ ಸೇರಿದ್ದು, ಶಿಕ್ಷಣ ಪಡೆದದ್ದು ಎಲ್ಲದಕ್ಕೂ ಕೃತಜ್ಞತೆ ಸಲ್ಲಿಸುತ್ತಾ... 'ಈಗ ನಾನು ನನ್ನ ಸಹೋದ್ಯೋಗಿಯಾದ ಸುವರ್ಣ ಶೇರೂಗಾರ್ ಎಂಬುವಳನ್ನು ಮದುವೆಯಾಗುತ್ತೇನೆಂದು ಘೋಷಿಸಿದ. ಹೆಬ್ಬಾರ್ ಕುಟುಂಬದ ಯಜಮಾನನಾದ ನಾನು ಇದನ್ನು ಕೇಳಿ ಅವಕ್ಕಾದೆ. ಅವಳಂತು ರಾಹು ಹೊಡೆದವಳಂತೆ ಸ್ತಬ್ಧಳಾಗಿ ನಿಂತು ಬಿಟ್ಟಳು. ಮೊದಲ ಬಾರಿಗೆ ತನ್ನ ಮಗ ಇಷ್ಟು ಉದ್ದ ಬೆಳೆದಿದ್ದಾನೆ ಎಂದು ಅರಿವಾಗಿ ಆಪಾದಮಸ್ತಕದಿಂದ ಅವನನ್ನು ನೋಡುತ್ತಾ ನಿಂತು ಬಿಟ್ಟಳು ಜೀವರಹಿತವಾಗಿ.

ಒಂದು ಕ್ಷಣ ಅಷ್ಟೆ. ಅಥವಾ ಕೆಲವು ನಿಮಿಷಗಳಷ್ಟೆ...

ನಂತರ ಶುರುವಾಯಿತು ಅಳು, ಕೋಪ, ಶಾಪ ಒಂದೇ.... ಎರಡೇ... ನಾನೇನೂ ಮಾತನಾಡಲಿಲ್ಲ.

ನಾನು ಮಾತೇ ಆಡಲಿಲ್ಲ. ಆಡುತ್ತಿಲ್ಲ ಎನ್ನುವುದು ಅವಳ ಕೋಪ ಇನ್ನಷ್ಟು ಜಾಸ್ತಿ ಆಗಲು ಕಾರಣವಾಯಿತು.

ಆದರೆ ನಾನೆಂಬ ನಾನು ಸುಮ್ಮನೆ ಗುಮ್ಮನ ತರ ಕುಳಿತಿದ್ದೆ. ಅದಕ್ಕೆ ಕಾರಣವಿತ್ತು.

ಅದು ನನ್ನ ಹಿಂದಿನ ನೆನಪಾಗಿತ್ತು.

* * *

ಕಡು ಬಡತನ. ಕೂಲಿ ಮಾಡಿ ಬದುಕುವ ನನ್ನಪ್ಪ. ಇನ್ನೊಬ್ಬರ ಮನೆ ಮುಸುರೆ ತಿಕ್ಕುವ ನನ್ನ ಅಮ್ಮ. ಇನ್ನು ಮನೆ ತುಂಬಾ ಐದು ಮಕ್ಕಳು. ನಾನೇ ಹಿರಿಯವನು. ಓದಿಗೆ ಬೆಂಕಿ ಹಾಕ್ತು. ಎರಡನೇ ಕ್ಲಾಸಿಗೆ ಹೋದವನಿಗೆ ಮೇಸ್ಟ್ರು ಕಲಿಯೋ ಅಂತ ದೊಣ್ಣೆಯಲ್ಲಿ ಬಡಿಯುತ್ತಿದ್ದರು. ಅಲ್ಲಿ ಇಲ್ಲಿ ಸಗಣಿ ಹೆಕ್ಕಲಿಕ್ಕೆ ಹೋಗ್ತಿದ್ದೆ. ಕಾಫಿ–ತಿಂಡಿ ಸಿಗುತಿತ್ತು. ಸಾಕಲ್ಲ. ಹೊಟ್ಟೆ ತುಂಬಿದರೆ ಸಾಕು... ಹೊಟ್ಟೆಯೇ ಮುಖ್ಯ. ತೇರು, ಉತ್ಸವ ಬಂದ್ರೆ ನಾಲ್ಕು ದಿನ ಊಟಕ್ಕೆ ತತ್ವಾರವಿಲ್ಲ. ಆದರೆ ತುಂಬಾ ತಡವಾಗ್ತಿತ್ತು. ಮೇಲಿನ ಜಾತಿಯವರು ಮೊದಲು ಊಟಕ್ಕೆ ಕುಳಿತಿರುತ್ತಿದ್ದರು. ನಾವು ನಂತರ... ಅದು ಸಂಜೆ ಆದರೂ ಆಶ್ಚರ್ಯ ಇಲ್ಲ. ಒಂದು ದಿನ ಹಸಿವು ತಡೀಲಿಕ್ಕೆ ಆಗದೇ.... ಅದೂ ಅವರೆಲ್ಲರಿಗೂ ಊಟ ಬಡಿಸುತ್ತಿದ್ದುದ ಕಂಡು ಚಪ್ಪರದ ಹೊರಗಿದ್ದ ನನಗೆ ಬಾಯಲ್ಲಿ ನೀರೂರಿ ಹಸಿವು ಇಮ್ಮಡಿಯಾಗಿ ನಿಧಾನವಾಗಿ ಚಪ್ಪರದ ಒಳಕ್ಕೆ ನುಸಿದು ಒಂದು ಪಂಕ್ತಿಯ ಬಾಳೆ ಹಿಡಿದು ಕುಳಿತು ಬಿಟ್ಟೆ.

ಎಲ್ಲರೂ ಕೈಯಲ್ಲಿ ನೀರು ಹಿಡಿದುಕೊಂಡು ಏನೇನೋ ಮಂತ್ರ ಹೇಳುತ್ತಾ ಅನ್ನದ ಅಗಳು ತಿನ್ನ ತೊಡಗಿದರು. ನಾನು ಅಷ್ಟು ದೊಡ್ಡವನಾಗಿದ್ದರು ನನಗಿದೆಲ್ಲಾ ಹೇಗೆ ಗೊತ್ತಾಗುತ್ತೆ. ಅದಕ್ಕೆ ಸರಿಯಾಗಿ ನಾನು ಅಂಗಿಯನ್ನು ಬಿಚ್ಚಿರಲಿಲ್ಲ. ಮೇಲುಸ್ತುವಾರಿಯ ಕಣ್ಣು ನನ್ನ ಮೇಲೆ ಬಿತ್ತು.

ಸೀದಾ ಬಂದವನೇ ನನ್ನ ಕೊಳಕು ಬಟ್ಟೆ ಎಲ್ಲಾ ನೋಡಿ–

ನಾನು ಅಂಗಿ ಬಿಚ್ಚಿ ಕುಳಿತಿಲ್ಲದ್ದು ಕಂಡು ನನ್ನ ಅಂಗಿ ಬಿಚ್ಚಿಸಿದ ಅಲ್ಲಿ ಜನಿವಾರ ಇರಲಿಲ್ಲ.

'ಥೂ! ಮುಂಡೇದೇ' ಎನ್ನುತ್ತಾ ನನ್ನನ್ನು ದರದರನೆ ಎಳೆದುಕೊಂಡು 'ನೀವು ಹೀಗೆ ಬಿಟ್ಟರೆ ನಮ್ಮ ತಲೆ ಮೇಲೆ ಕೂತುಕೋತೀರಿ? ಎಂದ. 'ಇವನ ತಲೆ ಬೋಳಿಸಿ' ಎಂದು 'ಹುಕುಂ' ನೀಡಿದ. ನನ್ನನ್ನು ಚಪ್ಪರದ ಹಿಂಬದಿ ಕರೆದುಕೊಂಡು ಹೋಗಿ ಒಂದು ಕೂದಲೂ ಇಲ್ಲದಂತೆ ತಲೆ ಬೋಳಿಸಿ ಬಿಟ್ಟರು. ನಾನು ಕುಗ್ಗಿ ಹೋದೆ.

ಇನ್ನು ಯಾರಿಗೂ ಮುಖ ತೋರಿಸಬಾರದು, 'ಊರು ಬಿಟ್ಟೇ ಹೋಗಬೇಕು' ಎಂದು ನಿರ್ಧರಿಸಿ ಕೊಲ್ಲೂರು ಬಿಟ್ಟು ಘಟ್ಟದ ಮೇಲಿನ ದಾರಿ ಹಿಡಿದೆ.

* * *

ದಾರಿಯಲ್ಲಿ ಸಿಕ್ಕ ಯಾರನ್ನೋ ಬೇಡಿದೆ. ಕೊಟ್ಟಷ್ಟು ತಗೊಂಡು ಕಾಫಿ–ತಿಂಡಿ